ಮೈಸೂರಿನ ಗೋಕುಲಂ ಅಥವಾ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಕ್ಯಾಷ್ ಕೌಂಟರ್ ಪ್ರಾರಂಭಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 160(318)

ಸದಸ್ಯರ ಹೆಸರು ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ)

ಉತ್ತರಿಸುವ ಸಚಿವರು ಶ್ರೀ ಎಂರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ಮೈಸೂರು ನಗರದ ಗೋಕುಲಂ ಅಥವಾ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಹಣ ಪಾವತಿಸಲು ಕೆ ಇ ಬಿ ಕ್ಯಾಷ್ ಕೌಂಟರ್ ತೆರೆಯಬೇಕೆಂದು ಮನವಿ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಉತ್ತರ

ಅ ಹೌದು

ಆ ಮೈಸೂರು ನಗರದ ಗೋಕುಲಂ ಹಾಗೂ ಕುಂಬಾರಕೊಪ್ಪಲು ಬಡಾವಣೆಯ ವಿದ್ಯುತ್ ಗ್ರಾಹಕರ ಅನುಕೂಲಕ್ಕಾಗಿ ವಿದ್ಯುತ್ ಶುಲ್ಕ ಪಾವತಿಸಲು, ಈ ಬಡವಾಣೆಯ ಸಮೀಪವಿರುವ ವಿಜಯನಗರ ರೈಲ್ವೆ ಬಡಾವಣೆ ಸಹಕಾರ ಸೊಸೈಟಿ ಕಛೇರಿಯಲ್ಲಿ ಪ್ರತಿವಾರದ ಬುಧವಾರ ಮತ್ತು ಶನಿವಾರದ ದಿನಗಳಲ್ಲಿ ಬೆಳಿಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 2-30ರವರಗೆ ಕ ವಿ ಪ್ರ ನಿ ನಿ ಕ್ಯಾಷ್ ಕೌಂಟರ್ ಕಾರ್ಯನಿರ್ವಹಿಸುತ್ತಿದೆ

ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ವಿದ್ಯುತ್ ಕಡಿತ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯೆ 161(389)

ಸದಸ್ಯರ ಹೆಸರು ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು ಶ್ರೀ ಎಂರಕುಮಾರ್ ಅ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಆ ಹುಬ್ಬಳ್ಳಿ-ಧಾರವಾಡ ನಗರ ಪ್ರದೇಶಗಳಲ್ಲಿ ವಿದ್ಯುತ್ ಕಡಿತ ಹೋಗಲಾಡಿಸಲು ಹೆಚ್ಚಿನ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ

ಆ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭಿಸಲಿಕ್ಕೆ ಆಯ್ಕೆ ಮಾಡಿದ ಪ್ರದೇಶಗಳಾವುವು?

ಇ ಎಷ್ಟು ವಿದ್ಯುತ್ ಉಪಕೇಂದ್ರಗಳ ಎಷ್ಟು ಮೆಗಾವ್ಯಾಟ್ ಸಾಮರ್ಥ್ಯ ಉಳ್ಳದಾಗಿರುತ್ತದೆ?

ಈ ಇಲ್ಲವಾದಲ್ಲಿ ಕಾರಣವೇನು?

ಉತ್ತರ

ಅ ಹೌದು ಇದೆ

ಆ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಆಯ್ಕೆ ಮಾಡಿರುವ ಪ್ರದೇಶಗಳ ವಿವರಗಳು ಈ ಕೆಳಕಂಡಂತಿದೆ

1 ಮೃತ್ಯುಂಜಯ ನಗರ

2 ಗದಗ್ ರೋಡ್

3 ಗಬ್ಬೂರು

4 ನೆಟ್ ಲೈಟ್ ಕಾಂಪ್ಲೆಕ್ಸ್

5 ಕೆ ಎಂ ಸಿ ಆಸ್ಪತ್ರೆ

6 ಮಹದೇವ ಟೆಕ್ಸ್‌ಟೈಲ್ಸ್

7 ಕುಸುಗಲ್ ರೋಡ್

8 ರಾಯನಾಳ್

9 ಯು ಎ ಎನ್ ಧಾರವಾಡ

10 ಪಿ ಹೆಚ್ ಸಿ ಕಾಂಪೌಂಡ್

11 ಆನಂದನಗರ

12 ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಇ ಒಟ್ಟು ಹನ್ನೆರಡು ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇವುಗಳ ಒಟ್ಟು ಸಾಮರ್ಥ್ಯ 170 ಎಂ ವಿ ಎ

ಈ ಈ ಪ್ರಶ್ನೆಯು ಉದ್ಭವಿಸುವುದಿಲ್ಲ

ಹುಬ್ಬಳ್ಳಿ-ಧಾರವಾಡದಲ್ಲಿ ಹೈಮಾಸ್ಟ್ ಲೈಟ್ ಅಳವಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 162(390)

ಸದಸ್ಯರ ಹೆಸರು ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ)

ಉತ್ತರಿಸುವ ಸಚಿವರು ಶ್ರೀ ಬಿ ಬಿ ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಹೈಮಾಸ್ಟ್ ಲೈಟ್ ಅಳವಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಹೈಮಾಸ್ಟ್ ಲೈಟ್ ಅಳವಡಿಸುವ ಉದ್ದೇಶವಿದೆ?

ಇ) ಇಲ್ಲವಾದಲ್ಲಿ ಕಾರಣವೇನು?

ಉತ್ತರ

ಅ) ಹೌದು

ಆ) 9 ಮೀಟರಿನ 7 ನೆಮಿ ಹೈಮಾಸ್ಟ್ ಲೈಟ್‌ಗಳನ್ನು ಹುಬ್ಬಳ್ಳಿಯಲ್ಲಿ ಈಗಾಗಲೇ ಈ ಕೆಳಕಂಡಂತೆ ಅಳವಡಿಸಲಾಗಿದೆ

1) ಕಿತ್ತೂರು ರಾಣಿ ಚೆನ್ನಮ್ಮ ವೃತ್ತ